**ಸಾಕ್ಷಿಯನ್ನು ದಿಃ16.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಈ ದಾವೆಯಲ್ಲಿರುವ ಬೋರೇಗೌಡ ರವರು ನನಗೆ ಮೈದ ಆಗಬೇಕು.

2. ಪೂರ್ವಕ್ಕೆಃ ಶಿವೇಗೌಡರ ಜಮೀನು, ಪಶ್ಚಿಮಕ್ಕೆ ಸಣ್ಣೇಗೌಡರ ಜಮೀನು, ಉತ್ತರಕ್ಕೆ ತಮ್ಮೇಗೌಡರ ಜಮೀನು, ದಕ್ಷಿಣಕ್ಕೆ ಹಾರಂಗಿ ನಾಲೆ, ಸದರಿ ಚಕ್ಕುಬಂದಿಯಲ್ಲಿ 1 ಎಕರೆ ಜಮೀನು ಬೋರೇಗೌಡರ ಹೆಸರಿನಲ್ಲಿ ಇದೆ ಎಂದರೆ ಸರಿ.

3. 2 ನೇ ಪ್ರತಿವಾದಿಯ ಶಿವೇಗೌಡರ ಹೆಸರಿನಲ್ಲಿ ಪೂರ್ವಕ್ಕೆಃ ರುಕ್ಮಿಣಮ್ಮ, ಪಶ್ಚಿಮಕ್ಕೆ ಬೋರೇಗೌಡರ ಜಮೀನು, ಉತ್ತರಕ್ಕೆ ತಮ್ಮೇಗೌಡರ ಜಮೀನು, ದಕ್ಷಿಣಕ್ಕೆ ಹಾರಂಗಿ ನಾಲೆ, ಚಕ್ಕುಬಂದಿಯಲ್ಲಿ 1 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ.

4. ಸಣ್ಣೇಗೌಡರ ಮಗ ಶಿವೇಗೌಡ ಎಂದರೆ ನನಗೆ ಮೈದ ಆಗಬೇಕು.

5. ನೀವು ಹಾಜರುಪಡಿಸಿದ ನಿಪಿ - 1 ರ ದಾಖಲಾತಿ ಪ್ರಕಾರ ಶಿವೇಗೌಡ ಬಿನ್ ಸಣ್ಣೇಗೌಡರ ಹೆಸರಿನಲ್ಲಿ 1 ಎಕರೆ ಜಮೀನು ಇದೆ ಎಂದರೆ, ಅವರು ಬೋರೇಗೌಡ, ಶಾಂತಪ್ಪೇಗೌಡ ಹಾಗೂ ಶಿವೇಗೌಡ ಮೂರು ಜನ ಸಹೋದರರು ಹಂಚಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮೂರೂ ಜನ ಹಂಚಿಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಕೊಟ್ಟಿದ್ದೇವೆ.

6. ಸಣ್ಣೇಗೌಡರಿಗೆ ಬೋರೇಗೌಡ ಹಾಗೂ ಶಿವೇಗೌಡ ಎಂದರೆ ಸರಿಯಲ್ಲ, ಶಾಂತಪ್ಪೇಗೌಡ ಸಹ ಮಗ ಇರುತ್ತಾರೆ.

7. ಕುಳ್ಳೇಗೌಡರಿಗೆ 3 ಜನ ಮಕ್ಕಳು ಎಂದರೆ ಸರಿ. ಅವರು ಹೆಸರು ದೊಡ್ಡೇಗೌಡ, ಸಣ್ಣೇಗೌಡ ಹಾಗೂ ಜವರೇಗೌಡ.

8. ನೀವು ಹೇಳುವಂತೆ ಕುಳ್ಳೇಗೌಡರ ಮಗ ದೊಡ್ಡೇಗೌಡರ ಅಲ್ಲ ಎಂದರೆ ಸರಿಯಲ್ಲ. ಕುಳ್ಳೇಗೌಡರಿಗೆ ತೋಪೇಗೌಡ, ಸಣ್ಣೇಗೌಡ ಹಾಗೂ ಜವರೇಗೌಡ ಎಂಬ ಮೂರು ಜನ ಮಕ್ಕಳು ಎಂದರೆ ತೋಪೇಗೌಡ ದೊಡ್ಡೇಗೌಡರ ಮಗ ಎಂದು ನುಡಿಯುತ್ತಾರೆ.

9. ದೊಡ್ಡೇಗೌಡರು ಕುಳ್ಳೇಗೌಡರ ಮಗ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇವೆ.

10. ನನ್ನ ಹೆಸರಿಗೆ ಸ.ನಂ.94/11 ಪಿ1 ಇದೆ.

11. ಸ.ನಂ.94/11 ಪಿ1 ರಲ್ಲಿ ಒಟ್ಟು 4 ಎಕರೆ ಜಮೀನಿನ ಚಕ್ಕುಬಂದಿ ನಿಮಗೆ ಗೊತ್ತಾ ಎಂದರೆ ನನಗೆ ಗೊತ್ತಿಲ್ಲ. 2 ಎಕರೆ ಜಮೀನನ್ನು ಅಳತೆ ಮಾಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ, ನನ್ನ ಪತಿಗೆ ಗೊತು.

12. ಪೂರ್ವಕ್ಕೆ: ಜವರೇಗೌಡರ ಸ.ನಂ.94/6 ಒಟ್ಟು ಎಷ್ಟು ಎಕರೆ ಎಂದರೆ, 12 ಎಕರೆ ಇದೆ. ಸ.ನಂ.94/6 ರಲ್ಲಿ ಒಟ್ಟು 700 ಎಕರೆ ಇದೆ ಎಂದರೆ ನನಗೆ ಗೊತ್ತಿಲ್ಲ.

13. ಸದರಿ 94/6 ರ ಜಮೀನಿಗೂ ಹಾಗೂ ಸ.ನಂ.94/11 ಪಿ1 ಜಮೀನಿಗ ಎಷ್ಟು ದೂರ ಇದೆ ಎಂದರೆ, ಹೊಂದಿಕೊಂಡಂತೆ ಇದೆ.

14. ಸ.ನಂ.94/6 ರ ಜಮೀನಿಗೂ ಸ.ನಂ.94/11 ಪಿ1 ರ ಜಮೀನಿಗೂ ಸುಮಾರು ಅರ್ಧ ಕಿ.ಮೀ ಅಂತರ ಇದೆ ಎಂದರೆ ಸರಿಯಲ್ಲ.

15. ಪೂರ್ವಕ್ಕೆ: 94/12 ಪಿ1 ರಲ್ಲಿ ನಿಮಗೆ 10 ಗುಂಟೆ, ಪಶ್ಚಿಮಕ್ಕೆ ಶಿವೇಗೌಡರ ಜಮೀನು ದಕ್ಷಿಣಕ್ಕೆ ಕರಿಯಪ್ಪ ನವರ ಜಮೀನು, ಉತ್ತರಕ್ಕೆ: ಹಾರಂಗಿ ನಾಲೆ ಸದರಿ ಚಕ್ಕುಬಂದಿಯಲ್ಲಿ ನಿಮಗೆ 2 ಎಕರೆ ಜಮೀನು ಇದೆ ಎಂದರೆ ಸರಿ.

16. 2 ನೇ ಪ್ರತಿವಾದಿ ಶಿವೇಗೌಡ ರವರು ಸಣ್ಣೇಗೌಡರ ಮಗ ಆದ ಕಾರಣ ಸ.ನಂ.94/11 ಪಿ1 ರಲ್ಲಿ 1 ಎಕರೆ ಜಮೀನು ಅವರ ಭಾಗಕ್ಕೆ ಬಂದು ಅವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸದರಿಯವರು ಆ ಭೂವಿಯಲ್ಲಿ ಕೊಳವೆ ಬಾವಿ ತೆಗೆಸಿ ವಿದ್ಯುತ್ ಸಂಪರ್ಕ ಪಡೆದಿದ್ದಾರೆ ಎಂದರೆ, ಅವರು ನಮ್ಮ ಜಮೀನಲ್ಲಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

17. ಸ.ನಂ.94/11 ಪಿ1 ರಲ್ಲಿ ಒಟ್ಟು 4 ಎಕರೆಯನ್ನು ಕುಳ್ಳೇಗೌಡರ ಮಗ ತೋಪೇಗೌಡ ಕ್ರಯಕ್ಕೆ ಪಡೆದ ಜಮೀನು ಎಂದರೆ, ಅವರ ತಂದೆ ಖರೀದಿ ಮಾಡಿರುವುದು ಎಂದು ನುಡಿಯುತ್ತಾರೆ. ಸದರಿ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

18. ನೀವೇ ಹಾಜರುಪಡಿಸಿದ ನಿಪಿ - 2 ರ ದಾಖಲೆ ಪ್ರಕಾರ ಬೋರೇಗೌಡನಿಗೆ 1 ಎಕರೆ ಹಾಗೂ ಶಿವೇಗೌಡನಿಗೆ 1 ಎಕರೆ ಎಂದರೆ ಸರಿಯಲ್ಲ.

19. 7 ನೇ ಪ್ರತಿವಾದಿ ರಘು ರವರು ಸಣ್ಣತೋಪೇಗೌಡರ ಮಗ. ಸದರಿ ಸಣ್ಣತೋಪೆಗೌಡರಿಗೆ ಸ.ನಂ.94/12 ಪಿ1 ರಲ್ಲಿ 1 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

20. 1 ನೇ ಪ್ರತಿವಾದಿ, 2 ನೇ ಪ್ರತಿವಾದಿ ಹಾಗೂ 7 ನೇ ಪ್ರತಿವಾದಿಯ ತಂದೆಗೆ ಎಂ.ಆರ್.ನಂ.34/1995-96 ರಂತೆ ಖಾತೆ ಆಗಿ ಅವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

21. ಪ್ರತಿವಾದಿಗಳ ಭಾಗಕ್ಕೆ ಬಂದ ಜಾಗದಲ್ಲಿ ಅವರು ಸ್ವಾಧೀನದಲ್ಲಿದ್ದರೂ ನೀವು ಅವರಿಗೆ ತೊಂದರೆ ಕೊಡುತ್ತಿದ್ದೀರಾ ಎಂದರೆ, ಅವರು ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ.

22. ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ